ಶ್ರೀ ವಿ. ಎಲ್. ಶಿವಪ್ಪ.—ಸ್ವಾಮಿ, ರಕ್ಕ ತನಿಖಾಧಿಕಾರಿಗಳು ನೂಚಿಸಿದ್ದ 72-ಆಕ್ಷೇಪಣೆಗಳ ಪೈಕಿ ಸಂಘದವರು 58 ಆಕ್ಷೇಪಣೆಗಳಿಗೆ ಉತ್ತರವನ್ನು ನೀಡಿದ್ದು, ಇನ್ನು 4 ಆಕ್ಷೇಪಣೆಗಳನ್ನು ಭಾಗಶಃ ಸರಿಪಡಿಸಲಾಗಿದೆ ಎಂದು ಹೇಳಿದ್ದೀರಿ. ಭಾಗಶಃ ಅನ್ನುವುದರ ಬಗ್ಗೆ ಆಕ್ಷೇಪಣೆಗಳು ಯಾವುವು ಎನ್ನುವುದನ್ನು ತಿಳಿಸುತ್ತೀರಾ ?

ಶ್ರೀ ಬಿ. ಎಲ್. ಗೌಡ.—ಮಾನ್ಯ ಸದಸ್ಯರಿಗೆ ಡೀಟೇಲ್ಸ್ ಬೇಕಾದರೆ ಟೇಬಲ್ ಮೇಲೆ ಇಡುವುದಕ್ಕೆ ಅಪೇಕ್ಷೆ ಪಡುತ್ತೇನೆ. ಭಾಗಶಃ ಅಂದರೆ ಕೆಲವು ಹಣ ವಸೂಲಾಗಬೇಕಾಗಿದೆ, ಕೆಲವು ಹಣವನೂ ಲಾಗಿದೆ. ಭಾಗಶಃ ಕ್ರಮ ತೆಗೆದುಕೊಂಡಿರುವುದು ಎಂದರೆ ಇನ್ನೂ ಇವುಗಳಮೇಲೆ ಕ್ರಮ ತೆಗೆದುಕೊಳ್ಳಬೇಕಾಗಿರುವುದು.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಸ್ವಾಮಿ, ತಾವು 1967-68 ರಲ್ಲಿ ಆ ಸೊಸೈಟಿಯಲ್ಲಿ ಗಳಿಸಿದ ಲಾಭ 8,766.31 ರೂಪಾಯಿಗಳು ಎಂದು ಹೇಳಿದಿರಿ, ಹಾಗಲ್ಲ ಉತ್ತರದಲ್ಲಿ 18766-31 ಎಂದು ಇದೆ. ಹಾಗಾದರೆ ಈವಾಗ ನೀವು ಹೇಳಿದ್ದು ಸರಿಯೋ ಅಥವಾ ಉತ್ತರದಲ್ಲಿ ಕೊಟ್ಟಿರುವುದು ಸರಿಯೋ ?

ಶ್ರೀ ಬಿ. ಎಲ್. ಗೌಡ.—ನಾನು ಹಾಗೆ ಹೇಳಿಲ್ಲ. ನಾನು 18,766-31 ರೂಪಾಯ್ಗಳು 1967-68 ರಲ್ಲಿ ಗಳಿಸಿದ ಲಾಭ ಎಂದು ಹೇಳಿದ್ದು.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಅನೇಕ ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಂಘದ ಸೊಸೈಟಿಗಳಲ್ಲಿ ಸರ್ಕಾರದವರು ಲಕ್ಷಾಂತರ ರೂಪಾಯಿ ಬಂಡವಾಳ ಹಾಕಿದ್ದಾರೆ. ಅದರಿಂದ ಎಷ್ಟು ಬಡ್ಡಿ ಬಂದಿದೆ ? 10-15 ಸಾವಿರ ರೂಪಾಯಿ ಬಂಡವಾಳ ಹಾಕಿರತಕ್ಕಂಥ ಖಾಸಗಿ ಸೊಸೈಟಿಗಳು ಲಾಭ ಬಂಬರುವುದರಿಂದ ಆ ಬಡ್ಡಿಯನ್ನು ಹಂಚಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಬಿ. ಎಲ್. ಗೌಡ.—ಅದು ಏನೂ ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಸ್ವಾಮಿ, ತುಮಕೂರಿನಲ್ಲಿರುವ ಸೊಸೈಟಿಗಳಲ್ಲಿ ಎಷ್ಟು ಪರ್ಸೆಂಟು ಲಾಭ ಬಂದಿದೆ ತಿಳಿಸುತ್ತಿರಾ ?

ಶ್ರೀ ಬಿ. ಎಲ್. ಗೌಡ.—ಆ ವಿವರ ನನ್ನಲ್ಲಿ ಇಲ್ಲ.

Extent of Land coming under Irrigation after Construction of Hidkal Dam

(236) Sri K. P. NADAGOWDA (Mudhol).—

Will the Chief Minister be pleased to state :—

(*a*) the number of acres of land, the Ghataprabha Project, after the construction of Hidkal dam can irrigate ;

(*b*) the total area that the project would command on the left side of the river for irrigation ;

(*c*) whether it is possible to irrigate lands on the right side of the river ;

(*d*) if so, the extent of such area ?

Sri VEERENDRA PATIL (Chief Minister).—

(*a*) 5·98 lakh acres.

(*b*) Irrigable area of 2·98 lakh acres.

(*c*) Yes.

(*d*) 3·00 lakh acres.

ಶ್ರೀ ಕೆ. ಪಿ. ನಾಡಗೌಡ.—ಹಿಡಕಲ್ ಡ್ಯಾಂ ಪೂರ್ತಿಯಾಗಬೇಕಾದರೆ ಎಷ್ಟು ವರ್ಷ ಹಿಡಿಯುಬಹುದು ಮತ್ತು ಬಲದಂಡೆ ನಾಲೆಯ ಅಗೆಯುವ ಕೆಲಸ ಯಾವಾಗ ಪ್ರಾರಂಭವಾಗಿ ಎಂದು ಮುಗಿಯಬಹುದು ಎನ್ನುವುದನ್ನು ಹೇಳುತ್ತಾರೆಯೇ ?

†ಶ್ರೀ ವೀರೇಂದ್ರ ಪಾಟೀಲ್.—ಈಗ ಸದ್ಯದಲ್ಲಿ ನಡೆಯುತ್ತಿರುವುದು ಎರಡನೇ ಹಂತದ ಕೆಲಸ. ಮೂರನೇ ಹಂತದಲ್ಲಿ ಬಲದಂಡೆ ನಾಲೆ ಕೆಲಸ ಬರುತ್ತದೆ. ಎರಡನೇ ಹಂತದ ಕೆಲಸವನ್ನು ನಾವು ಇನ್ನೂ ಮುಗಿಸುವುದಕ್ಕೇ ಆಗಿಲ್ಲ. ಆದ್ದರಿಂದ ಎರಡನೇ ಹಂತದ ಕೆಲಸ ಮುಗಿದಮೇಲೆ ಮೂರನೇ ಹಂತದ ಕೆಲಸವನ್ನು ಪ್ರಾರಂಭ ಮಾಡಬೇಕೆಂದು ಅದಕ್ಕೆ ಪ್ಲಾನ್, ಎಸ್ಟಿಮೇಟ್ ಮತ್ತು ಪ್ರಾಜೆಕ್ಟ್ ರಿಪೋರ್ಟುಗಳನ್ನು ಕೇಂದ್ರ ಸರ್ಕಾರದ ಅನುಮತಿಗಾಗಿ ಕಳಿಸಿಕೊಟ್ಟಿದ್ದೇವೆ.

ಶ್ರೀ ಕೆ. ಪಿ. ನಾಡಗೌಡ.—ಅರ್ಧಕ್ಕಿಂತ ಹೆಚ್ಚು ಪ್ರದೇಶ ಬಲದಂಡೆಯಲ್ಲಿ ಬರುತ್ತದೆ. ಅಣೆಕಟ್ಟು ನಿರ್ಮಾಣವಾದ ಹತ್ತಾರು ವರ್ಷಗಳವರೆಗೂ ಆ ನೀರನ್ನು ಹೇಗೆ ಉಪಯೋಗ ಮಾಡುತ್ತೀರಿ ? ನಾಲೆಯನ್ನು ತೆಗೆಯುವುದಕ್ಕೆ ಈಗಲೇ ಪ್ರಾರಂಭಮಾಡದೆ ಇದ್ದರೆ ಹತ್ತು ವರ್ಷದ ತನಕ ನೀರನ್ನು ಉಪಯೋಗ ಮಾಡದೇ ಇರುವುದು ಮೂರ್ಖತನ ಅನ್ನಿಸುವುದಿಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್.—ಮೂರ್ಖತನ ಎಂದು ಯಾವುದೂ ಅನ್ನಿಸುವುದಿಲ್ಲ; ಆ ಮೂರ್ಖತನ ಯಾರೂ ಮಾಡುವುದಕ್ಕೆ ಹೋಗುವುದಿಲ್ಲ. ಮೂರನೇ ಹಂತದಲ್ಲಿ ರಿಸರ್ವಾಯರ್ ಕೆಪಾಸಿಟಿ ಹೆಚ್ಚು ಮಾಡಬೇಕಾಗುತ್ತದೆ. ಮಾನ್ಯ ಸದಸ್ಯರು ಹೇಳಿದಹಾಗೆ ಮೂರನೇ ಹಂತದ ಕೆಲಸ ತೆಗೆದು ಕೊಳ್ಳುವವರೆಗೂ ನೀರು ಅಲ್ಲಿ ತರುವುದಿಲ್ಲ. ನೀರು ಹೆಚ್ಚು ಕ್ಷೇಖರಣೆ ಮಾಡಬೇಕಾಗಿದ್ದರೆ ರಿಸರ್ವಾಯರ್ ಕೆಪಾಸಿಟಿ ಹೆಚ್ಚು ಮಾಡಬೇಕು ಮತ್ತು ಅದಕ್ಕಾಗಿ ದಂಡೆಯ ಎತ್ತರವನ್ನು ಹೆಚ್ಚಿಸಬೇಕು. ಇದನ್ನು ಮೂರನೇ ಹಂತದಲ್ಲಿ ತೆಗೆದುಕೊಳ್ಳಲಾಗುವುದು. ರಿಸರ್ವಾಯರ್ ಕೆಪಾಸಿಟಿ ಹೆಚ್ಚು ಮಾಡುವ ಕೆಲಸವನ್ನು ತೆಗೆದುಕೊಂಡಾಗ ಬಲದಂಡೆ ನಾಲೆಯ ಅಗೆಯುವ ಕೆಲಸವನ್ನೂ ಮೂರನೇ ಹಂತದಲ್ಲಿ ಒಟ್ಟಿಗೇ ತೆಗೆದುಕೊಳ್ಳಲಾಗುತ್ತದೆ.

ಶ್ರೀ ಕೆ. ಎಚ್. ಪಾಟೀಲ್.—ಬಿಜಾಪುರ ಜಿಲ್ಲೆ ಬರಗಾಲ ಪ್ರದೇಶವಾಗಿರುವುದರಿಂದ, ಅಲ್ಲಿ ದುಷ್ಕಾಲ ಇರುವುದರಿಂದ ದುಷ್ಕಾಲ ಪರಿಹಾರ ಕಾಮಗಾರಿಗಳಿಗೆ ಉಪಯೋಗ ಮಾಡುವ ಹಣವನ್ನು ಸರ್ಕಾರ ಹಿಡಕಲ್ ಡ್ಯಾಂ ಕೆಲಸಕ್ಕೆ ಉಪಯೋಗ ಮಾಡಿದರೆ ಹೆಚ್ಚು ದುಡಿಯಬಹುದು. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ವಿಚಾರ ಮಾಡುತ್ತಾರೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಅಲ್ಲಿ ಮಾಡುವಂಥ ಕೆಲಸವೇನೂ ಇಲ್ಲ. ಎರಡನೇ ಹಂತದಲ್ಲಿ ಆಗಬೇಕಾಗಿದ್ದ ಕೆನಾಲ್ ಕೆಲಸವೆಲ್ಲ ಈಗಾಗಲೇ ಆಗಿದೆ. ಎರಡನೇ ಹಂತದಲ್ಲಿ ನಡೆಯುತ್ತಿರುವ ಕೆಲಸವೆಂದರೆ ಹಿಡಕಲ್ ಡ್ಯಾಂ ಕೆಲಸ. ಆ ಕೆಲಸ ನಡೆಯುತ್ತಿದೆ. ನಾಲೆಗೆ ಸಂಬಂಧಪಟ್ಟಹಾಗೆ ಏನಾದರೂ ಕೆಲಸಗಳು ಉಳಿದಿದ್ದರೆ ಅಲ್ಲಿನ ಅಧಿಕಾರಿಗಳು ಅದನ್ನು ಮಾಡುತ್ತಿದ್ದಾರೆ.

ಶ್ರೀ ಎ. ಆರ್. ಪಂಚಗಾವಿ.—ಈಗ ಆಗಿರುವುದು ಎಡದಂಡೆ ಕಾಲುವೆ ಕೆಲಸ, ಬಲದಂಡೆ ಕಾಲುವೆ ಕೆಲಸವಲ್ಲಿ ಕಾಲುವೆಯನ್ನು ಅಗೆಯುವುದು ಇಂಥ ಅನೇಕ ಕೆಲಸಗಳನ್ನು ಮಾಡ ಬೇಕಾಗುತ್ತದೆ. ಅದಕ್ಕಾಗಿ ಬಲದಂಡೆ ಕಾಲುವೆ ಕೆಲಸವನ್ನು ಈಗಲೇ ತೆಗೆದುಕೊಳ್ಳುವ ವಿಚಾರವನ್ನು ಸರ್ಕಾರ ಪರಿಶೀಲಿಸುವುದೇ ?

ಶ್ರೀ ವೀರೇಂದ್ರ ಪಾಟೀಲ್.—ಹಣದ ಮುಗ್ಗಟ್ಟು ಇರುವುದರಿಂದ ಆ ಕೆಲಸವನ್ನು ಈಗಲೇ ಪ್ರಾರಂಭ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಈಗ ಕಾಲುವೆ ಕೆಲಸ ಪೂರ್ತಿಯಾಗಿರುವುದಕ್ಕೆ ರಿಸರ್ವಯರ್ ಆಗದೆ ಇರುವುದರಿಂದ ಅದನ್ನು ಆದಷ್ಟು ಜಾಗ್ರತೆ ಮುಗಿಸಬೇಕು ಎಂದು ಅದರ ಕೆಲಸದಲ್ಲಿ ಹೆಚ್ಚು ಕಾನ್‌ಸೆಂಟ್ರೇಟ್ ಮಾಡುತ್ತಿದ್ದೇವೆ. ರಿಸರ್ವಾಯರ್ ಪೂರ್ತಿಯಾದಮೇಲೆ ಅದನ್ನು ಏರಿಸಿದಾಗ ಬಲದಂಡೆ ಕಡೆಗೆ ನೀರಾವರಿಗೆ ಅನುಕೂಲ ಮಾಡಿಕೊಡಬೇಕೆಂಬ ಉದ್ದೇಶ ಸರ್ಕಾರಕ್ಕೆ ಇದೆ.

ಶ್ರೀ ಸಿದ್ದಯ್ಯ ಕಾಶಿಮಠ.—ಬಲದಂಡೆ ನಾಲೆಯ ಕೆಲಸ ಬಹಳ ನಿಧಾನವಾಗುತ್ತಿದೆ. ಈ ಕೆಲಸಕ್ಕಾಗಿ ಈ ವರ್ಷ ಎಷ್ಟು ಹಣವನ್ನು ಒದಗಿಸಲಾಗಿದೆ ?

ಶ್ರೀ ವೀರೇಂದ್ರ ಪಾಟೀಲ್.—ಬಲದಂಡೆ ನಾಲೆಯ ಕೆಲಸ ಇನ್ನೂ ಪ್ರಾರಂಭವಾಗಿಲ್ಲ ಎಂದು ನಾನು ಈಗಾಗಲೇ ಸ್ಪಷ್ಟವಾಗಿ ಹೇಳಿದ್ದೇನೆ. ಅದನ್ನು ಮೂರನೆ ಹಂತದಲ್ಲಿ ತೆಗೆದುಕೊಳ್ಳಬೇಕು ಎಂದು ಇದ್ದೇವೆ. ಈಗ ಕಾರ್ಯಗತವಾಗುತ್ತಿರುವುದು ಎರಡನೇ ಹಂತದ ಕೆಲಸ ಮಾತ್ರ. ಇದರಲ್ಲಿ ಎಡದಂಡೆ ನಾಲೆಯ ಕೆಲಸ ಬರುತ್ತದೆ. ಮೂರನೇ ಹಂತದ ಕೆಲಸವನ್ನು ಪ್ರಾರಂಭ ಮಾಡುವಾಗ ಬಲದಂಡೆ ನಾಲೆಯ ಕೆಲಸವನ್ನು ತೆಗೆದುಕೊಳ್ಳುವ ಪ್ರಶ್ನೆ ಬರುತ್ತದೆ.

Sri N. B. SIRDESAI.—May I know, Sir, how many families are treated as displaced families on account of acquisition of their lands coming under the project area ?

Sri VEERENDRA PATIL.—Let the hon. Member put a separate question. I will furnish information.

Sri V. N. PATIL.—Just now Hon. Chief Minister was pleased to say that on account of paucity of funds, Government are not able to carry out most of the projects. After the Bank nationalisation, in view of the change in the financial position is it not posible to take up the projects ?

Sri VEERENDRA PATIL.—Sir, it is too early for me to say how far the State Government is going to benefit by the Bank nationalisation. But if Banks are going to advance money to State Government to take up essential projects, we will whole-heartedly welcome because it will be possible to accelerate the progress under the irrigation projects.

Kabini Irrigation Project

(255) Sri N. HUTCHMASTY GOWDA (Huliyurdurga).—

Will the Chief Minister be pleased to state :—

(*a*) the estimated amount of Kabini Project and the proposed area of Irrigation in the first instance ;

(*b*) The total outlay till the end of June on various items of its works ;

(*c*) the extent of amount of the revised estimate and the proposed atchkat ;

(*d*) the reasons for the increased expenditure on various items ;

(*e*) whether the Engineers have sent proposals stipulating the time limit within which the project is to be completed and the money to be spent each year during the period ;

(*f*) whether the Government have accepted the proposals of the Engineers ?

Sri VEERENDRA PATIL (Chief Minister).—

(*a*) Rs. 320 lakhs.
30,000 Acres.

(*b*) Rs. 472 lakhs

(*c*) Rs. 2,480 lakhs.
1,26,000 acres.

d) (i) Due to increase in the scope of the project